(ಶ್ರೀ ಹುಚ್ಚಮಾಸ್ತಿ ಗೌಡ)

ವುದಕ್ಕೆ ಯೋಚನೆ ಮಾಡಬೇಕೆಂದು ಮೂನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದಕ್ಕೆ ಪ್ರತ್ಯೇಕವಾದ ಇಲಾಖೆ ಇದ್ದೇ ಇದೆ. ಆದರೆ ಅವರ ಮನಸ್ಸಿನಲ್ಲಿ ಏನಾದರೂ ಪ್ರತ್ಯೇಕವಾಗಿ ಇದಕ್ಕೋಸ್ಕರ ಒಂದು ಅಡ್ಮಿನಿಸ್ಟ್ರೇಷನ್ ಇರಬೇಕು ಎಂದರೆ ಅದು ಮುಖ್ಯಮಂತ್ರಿಗಳಿಗೆ ಸೇರಿದಂಥ ವಿಷಯ.

ಈಗ ನನಗೆ ಗೊತ್ತಾಗಿರತಕ್ಕಂಥ ಸಮಾಚಾರದ ಪ್ರಕಾರ ಸುಮಾರು 10 ಕೋಟಿ ರೂಪಾಯಿಯಷ್ಟು ಬೆಲೆ ಉಳ್ಳಂಥ ಚಿನ್ನ ಬೆಳ್ಳಿ ಒಡವೆಗಳು ಇವೆಯೆಂದು ಈಗ ಇರತಕ್ಕಂಥ ಅಂಕ ಅಂಶದ ಪ್ರಕಾರ ಗೊತ್ತಾಗಿದೆ. ಇದನ್ನೆಲ್ಲಾ ಕ್ರಮ ಪಡಿಸಿ ಅದನ್ನು ಯಾವ ರೀತಿ ಮಾಡಬೇಕೆಂಬುದು ಮತ್ತು ಇದಕ್ಕೆ ಒಂದು ಯೂನಿಫಾರಂ ಲೆಜಿಸ್ಲೇಷನ್ ತರತಕ್ಕಂಥಾದ್ದರ ಬಗ್ಗೆ ಇವೆಲ್ಲಾ ಸರ್ಕಾರದ ಪರ್ಯಾಲೋಚನೆಯಲ್ಲಿ ಇದೆ.

FIRE ACCIDENT IN GULBARGA DIST.

SRI PRABHAKAR TELKAR.—In reply to (a) and (b), it is stated that the number of fire accidents in 1971-72 is 195 and the number of huts of cottages burnt is 434. Are there any casulaties or deaths due to those accidents and if so, whether the Government is in a position to give any compensation in such cases?

*ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈ ಬಗ್ಗೆ ಪೂರಾ ಇನ್‌ಫರ್ಮೇಷನ್ ಈಗ ನನ್ನ ಹತ್ತಿರ ಇಲ್ಲ. ಮತ್ತು ಇದಕ್ಕೆ ಪರಿಹಾರ ಎಷ್ಟು ಕೊಟ್ಟಿದ್ದಾರೆ ಅನ್ನುವ ಅಂಕಿ ಅಂಶ ಸಂಗ್ರಹಿಸುವುದಕ್ಕೆ ಇನ್ನೂ ಆಗಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುವುದಕ್ಕೆ ನನ್ನ ಒಪ್ಪಿಗೆ ಇದೆ.

MADAM SPEAKER.—This Question is held over.

T. B. WARD IN PANDIT'S GENERAL HOSPITAL AT SIRSI

60. SMT. RADHA BHATT (Ankola).—

6. Will the Minister for Health be pleased to state :—

(*a*) whether Government is examining the question of constructing a T. B. Ward in the Pandit's General Hospital at Sirsi, North Kanara District;

(*b*) if so, when the Government is going to examine it;

(*c*) whether the Government is aware that a Central Bank in North Kanara District has donated some money towards opening of a T. B. Ward in the Pandit, General Hospital Sirsi;

(*d*) whether it has come to the notice of Government that there is storage of medicines in Pandit's General Hospital, Sirsi;

(*e*) if so, the steps proposed to be taken by Government to remedy the shortage of medicines?

SRI H. SIDDAVEERAPPA (MINISTER FOR HEALTH).—

(*a*) At present there is no such proposal

(*b*) Does not arise in view of answer to clause (*a*) above.

(*c*) Yes. K. D. C. C. Bank Ltd., Sirsi, have resolved to offer Rs. 25,000 for the construction of an Isolation ward at the said Hospital and have written so to the Finance Minister.

(*d*) No

(*e*) Does not arise in view of answer to clause (*d*)

ಶ್ರೀಮತಿ ರಾಧಾಭಟ್. ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸದ್ಯದಲ್ಲಿ ಅಂತಹ ಸಲಹೆ ಯಾವುದೂ ಇಲ್ಲ ಎಂದು ಹೇಳಿದ್ದೀರಿ. ಆದರೆ ಸಾರ್ವ ಜನಿಕರಿಂದ ಒತ್ತಾಯ ಮತ್ತು ಬೇಡಿಕೆ ಬಂದಿದ್ದರಿಂದ ನಾನು ಇದು ಅವಶ್ಯಕವಿದೆ ಎಂದು ಹೇಳುತ್ತೇನೆ. ಆದುದರಿಂದ ಇದನ್ನು ಕೂಡಲೇ ಪರಿಶೀಲಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಕೇಂದ್ರ ಸರ್ಕಾರದ ಸ್ಕೀಂ. ಅವರ ಸ್ಕೀಂ ಪ್ರಕಾರ ಜಿಲ್ಲೆಗೆ ಒಂದೇ ಕೇಂದ್ರ ಇರತಕ್ಕಂಥಾದ್ದು. ಅಂಥಾ ಪೇಷೆಂಟ್ಸ್ ಏನಾದರೂ ಇದ್ದರೆ ಅವರನ್ನು ಟ್ರೀಟ್ ಮಾಡ ಬೇಕಾದಕ್ಕೆ ಡಿಸ್ಟ್ರಿಕ್ ಹೆಡ್‌ಕ್ವಾರ್ಟರ್ಸ್‌ಗೆ ಕಳುಹಿಸು ತ್ತಾರೆ. ಆದರೆ ತಾವು ಹೇಳಿದುದರ ಬಗ್ಗೆ ಅದನ್ನು ವಿಸ್ತರಿಸುವ ಕಾಲ ಬಂದಾಗ ವಿಚಾರ ಮಾಡೋಣ.

ಶ್ರೀಮತಿ ರಾಧಾಭಟ್.—ಸಿರಸಿಯ ಕೆ. ಡಿ. ಸಿ. ಸಿ. ಬ್ಯಾಂಕಿನವರು ಇದರ ಬಗ್ಗೆ 25 ಸಾವಿರ ರೂಪಾಯಿಗಳನ್ನು ದೇಣಿಗೆ ನೀಡಲು ನಿರ್ಧರಿಸಿದ್ದು ಈ ಬಗ್ಗೆ ಹಣಕಾಸಿನ ಮಂತ್ರಿಗಳಿಗೆ ಬರೆದಿದ್ದಾರೆ ಎಂದು ಹೇಳಿದ್ದೀರಿ. ಇದು ಸದ್ವಿನಿಯೋಗವಾಗುವಂತೆ ಯಾವಾಗ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವಕಾಶ ಸಿಕ್ಕಿದಾಗ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—(ಈ) ಪ್ರಶ್ನೆಗೆ ಉತ್ತರವಾಗಿ ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. 1973-74ನೇ ಸಾಲಿಗೆ ಒದಗಿಸಬೇಕಾದ ಔಷಧಿಗಳನ್ನು ಯಾವಾಗ ಕಳುಹಿಸಿಕೊಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಕಳುಹಿಸಿಕೊಡುತ್ತಾ ಇದ್ದೇವೆ. ಈ ಬಗ್ಗೆ ಇನ್ನೂ ಪೆಂಡರ್ ಫೈನಲೈಸ್ ಆಗಿಲ್ಲ. ಇದಕ್ಕೆ ಒಬ್ಬರು ಜಾಯಿಂಟ್ ಡೈರೆಕ್ಟರನ್ನು ಇನ್‌ಛಾರ್ಜ್ ಇಟ್ಟಿದ್ದೇವೆ. ಈಗ ಇದು ಮೂವ್ ಆಗುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ—ನಾನು ಎಲ್ಲಾ ಆಸ್ಪತ್ರೆಗಳನ್ನೂ ಕೇಳಿ ಕೊಂಡು ಬಂದಿದ್ದೇನೆ. ಇನ್ನೂ ಅಲ್ಲಿಗೆ ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ— ಈಗಾಗಲೇ ಕಳುಹಿಸುತ್ತಿದ್ದೇವೆ.

ಶ್ರೀ ಎಚ್ ಎಸ್. ಸಿದ್ದಪ್ಪ— ಈಗ ಅನೇಕ ಕಂಪೆನಿಗಳು ಸರ್ಕಾರಕ್ಕೆ ಔಷಧಿಗಳು ಏನು ಸಪ್ಲೈ ಮಾಡುತ್ತಿದ್ದಾರೋ ಅವರಿಗೆ ಸರ್ಕಾರದಿಂದ ಸಾವಿರಾರು ರೂಪಾಯಿಗಳು ಬರಬೇಕಾಗಿರುವುದರಿಂದ ಐ. ಟಿ. ಎಲ್. ನವರು ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಬರಾಯಿ ಮಾಡುತ್ತಾ ಇಲ್ಲ ಎಂದು ಕೇಳಿದೆವು. ಹಾಗಿದ್ದರೆ ಸರ್ಕಾರದವರು ಅವರಿಗೆ ಎಷ್ಟು ಸಾಲ ಕೊಡಬೇಕಾಗಿದೆ ಎನ್ನುವುದನ್ನು ತಿಳಿಸುತ್ತೀರಾ?.

ಶ್ರೀ ಎಚ್. ಸಿದ್ದವೀರಪ್ಪ— ಅವರಿಗೆ ಎಷ್ಟು ಕೊಡಬೇಕು ಎನ್ನುವುದು ನನಗೆ ಗೊತ್ತಿಲ್ಲ. ಐ. ಟಿ. ಎಲ್. ನವರು ಆಸ್ಪತ್ರೆಗಳಿಗೆ ಔಷಧಿಗಳನ್ನು ಸಪ್ಲೈ ಮಾಡದೇ ಇರುವುದಕ್ಕೆ ಬೇರೆ ಕಾರಣಗಳು ಇವೆ. ಅವರನ್ನು ನಾವು ಕೇಳಿದ್ದೇವೆ. ಒಂದು ಸ್ಪೆಸಿಫೈಡ್ ಕಾಂಟ್ರಾಕ್ಟ್ ಕೊಡಿ, ಒಂದು ಜನರಲ್ ಟರ್ಮ್ಸ್ ಕೊಡಿ ಎಂದು ಕೇಳಿದ್ದೇವೆ. ಅದಕ್ಕೆ ಅವರು ಒಪ್ಪಿಲ್ಲ. ಅದಕ್ಕೇ ಇನ್ನೂ ಫೈನಲೈಸ್ ಆಗಿಲ್ಲ.

ಶ್ರೀಮತಿ ರಾಧಾಭಟ್— ನಾನು ಸಿರಸಿ ಆಸ್ಪತ್ರೆಗೆ ಭೇಟಿ ಕೊಟ್ಟು ಬಂದಿದ್ದೇನೆ. ಅಲ್ಲಿ ಔಷಧಿ ಇಲ್ಲ, ಬೆಡ್ ಇಲ್ಲ, ಜನರು ಪರದಾಡುತ್ತಾ ಇದ್ದಾರೆ. ಆದುದರಿಂದ ಅಲ್ಲಿಗೆ ಔಷಧಿಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ— 1973-74 ನೇ ಸಾಲಿಗೆ ತಿರಸಿ ಆಸ್ಪತ್ರೆಗೆ ಔಷಧಿಗಾಗಿ 15 ರಿಂದ 25 ಸಾವಿರ ರೂಪಾಯಿಯವರೆಗೆ ಮಂಜೂರು ಮಾಡುತ್ತಾ ಇದ್ದೇವೆ. ಔಷಧಿಗಳು ಈಗ ಮೂವ್ ಆಗುತ್ತಾ ಇದೆ. I will make a comprehensive statement about the supply of medicines to various Hospitals in State if you permit it.

AIDED HOSTELS OTHER THAN D. C HOSTELS

67. SRI K. SIDDAIAH (Santhemarahally)—

Will the Minister for Education be pleased to state :—

(*a*) The number of hostels (other than S. C. and S. T.) for which aid (monetary or otherwise) is granted by Government in Mysore District ;

(*b*) The names of such hostels and the amount granted and the year from which it is granted ;

(*c*) Are the candidates belonging to all castes and communities admitted to these hostels ;

(*d*) Whether the Committee of Management in these hostels consists of members belonging to different castes and communities ;

(*e*) Whether there are any cooks and kitchen servants belonging to other castes employed respectively in these hostels ?

SRI A. R. BADARINARAYANA (Minister for Education):

(*a*) 17

(*b*) The particulars are given in the statement placed on the Table of the House*.

*Copy placed in the Mysore Legislative Library *vide No.* 1 dated 27-8-1973.